ದಿನಾಂಕಃ 13.07.2023
(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)
ಪ್ರಾ.ಸಾಃ 1

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಸ್.ಹೆಚ್.ಎಸ್ ., ವಕೀಲರಿಂದಃ</u>

2. ನನಗೆ ವಾರ್ಷಿಕವಾಗಿ ಇಂತಿಷ್ಟೇ ಆದಾಯ ಬರುತ್ತಿತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ. ನಾನು ಈ ಹಿಂದೆ ವ್ಯವಸಾಯದ ಜಮೀನು ಇದ್ದು, ಆ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ. ಸದರಿ ದಾಖಲಾತಿ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ಹಾಜರುಪಡಿಸುತ್ತೇನೆ.

3. ಆರೋಪಿ ನನಗೆ ಪರಿಚಯವಾಗಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿ ಆರ್ಥಿಕವಾಗಿ ಸದೃಢವಾಗಿದ್ದಾರೆ, ಅವರು ಸಾಲ ಪಡೆಯಲು ಅರ್ಹರಲ್ಲ ಅಂದರೆ ಸರಿಯಲ್ಲ.

4. ನಾನು ಯಾವುದೇ ಚೀಟಿ ವ್ಯವಹಾರ ಮಾಡುತ್ತಿಲ್ಲ. ಆ ಬಗ್ಗೆ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿತರ ಸ್ನೇಹಿತರೊಬ್ಬರು ನಿಮ್ಮ ಬಳಿ ಚೀಟಿ ಹಾಕಿದ್ದು, ಆ ಸಂಬಂಧವಾಗಿ ಆರೋಪಿ ತನ್ನ ಚೆಕ್‌ನ್ನು ಭದ್ರತೆಗಾಗಿ ನೀಡಿದ್ದರು ಅಂದರೆ ಸಾಕ್ಷಿ ನಾನು ಯಾವುದೇ ಚೀಟಿ ವ್ಯವಹಾರ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ಚೀಟಿ ಮುಗಿದ ನಂತರ ಆರೋಪಿತರ ಸ್ನೇಹಿತರು ನಿಮ್ಮ ಬಳಿ ಬಂದು ಭದ್ರತೆಗಾಗಿ ನೀಡಿದ್ದ ಚೆಕ್‌ನ್ನು ವಾಪಸ್ಸು ಕೇಳಿದಾಗ, ನೀವು ಕೊಡುವುದಾಗಿ ಹೇಳಿ, ನೀಡಿರುವುದಿಲ್ಲ ಅಂದರೆ ಸರಿಯಲ್ಲ.

5. ನಾನು ಆರೋಪಿಯ ಚೆಕ್‌ನ್ನು ದುರುಪಯೋಗಪಡಿಸಿಕೊಂಡು, ಸುಳ್ಳು ಪ್ರಕರಣದ ದಾಖಲು ಮಾಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

6. ನ್ಯಾಯಾಲಯದಿಂದ ಸಮನ್ಸ ಬಂದ ನಂತರವೂ ಸಹ ಆರೋಪಿ ಮತ್ತು ಅವರ ಸ್ನೇಹಿತರ ನಿಮ್ಮ ಬಳಿ ಬಂದು ಭದ್ರತೆಗಾಗಿ ನೀಡಿದ ಚೆಕ್‌ನ್ನು ವಾಪಸ್ಸು ಕೇಳಿದ್ದರು ಅಂದರೆ ಸರಿಯಲ್ಲ.

7. ನಿಪಿ.1 ನ್ನು ಚೀಟಿಯ ಭದ್ರತೆಗಾಗಿ ನೀಡಿದ್ದು, ಸಾಲಕ್ಕಾಗಿ ಅಲ್ಲ ಅಂದರೆ ಸರಿಯಲ್ಲ. ಒಂದು ವೇಳೆ ಆರೋಪಿಗೆ ಸಾಲ ನೀಡಿದ್ದಲ್ಲೇ ಆಗಿದ್ದಲ್ಲಿ ಅವರ ಸರಿಯಾದ ವಿಳಾಸವನ್ನು ನಮೂದು ಮಾಡಿ, ನಿಪಿ.3 ರಂತೆ ನೋಟೀಸ್ ಜಾರಿ ಮಾಡುತ್ತಿದ್ದೀರಿ, ಆದರೆ ನೀವು ಅವರಿಗೆ ಯಾವುದೇ ಸಾಲ ನೀಡದೇ ಇರುವ ಕಾರಣ ಸರಿಯಾದ ವಿಳಾಸ ನೀಡದೇ ನೋಟೀಸ್ ಜಾರಿ ಮಾಡಿದ್ದೀರಿ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ಎನ್.ಉಷಾರಾಣಿ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಚನ್ನಪಟ್ಟಣ.